# ರಜನಿಯ ಅರಾಜಕೀಯ

ರಜನಿಕಾಂತ್‌ಗೆ ರಾಜಕೀಯದಲ್ಲಿ ನಿಜಕ್ಕೂ ಆಸಕ್ತಿ ಇದೆಯಾ? ನೇರ ಚುನಾವಣಾ ರಾಜಕೀಯಕ್ಕೆ ಧುಮುಕುವ ಧೈರ್ಯ ಇಲ್ಲವಾ? ರಾಜಕೀಯಕ್ಕೆ ಇಳಿದರೆ ಲಾಭಕ್ಕಿಂತ ನಷ್ಟ ಹೆಚ್ಚು ಎಂದು ಆತ ಹೆದರುತ್ತಿದ್ದಾರಾ? ಆಳುವ ಪಕ್ಷಗಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲು ಸುಮ್ಮನೆ ರಾಜಕೀಯದ ನಾಟಕ ಆಡುತ್ತಿದ್ದಾರಾ?

‘ರಜನಿ ರಾಜಕೀಯ’ದ ಕುರಿತು ಸದ್ಯಕ್ಕೆ ಎದ್ದಿರುವ ಈ ಪ್ರಶ್ನೆಗಳಿಗೆ ಉತ್ತರಿಸಲು ರಜನಿಕಾಂತ್‌ಗೆ ಮಾತ್ರ ಸಾಧ್ಯ. ಆದರೆ ಸ್ಪಷ್ಟ ಉತ್ತರ ಆತನಿಗೂ ಗೊತ್ತಿದ್ದಂತಿಲ್ಲ. 2019ರ ಲೋಕಸಭಾ ಚುನಾವಣೆಗೆ ಬಹುತೇಕ ರಾಜಕೀಯ ಪಕ್ಷಗಳು ಅನಧಿಕೃತ ಚುನಾವಣಾ ಪ್ರಚಾರ ಆರಂಭಿಸಿವೆ. ಇದರ ಮಧ್ಯೆ ರಜನಿಕಾಂತ್, ‘2019ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ ಸ್ಪರ್ಧಿಸುವುದಿಲ್ಲ. ನಮ್ಮ ಪಕ್ಷದ ಹೆಸರನ್ನು ಮತ್ತು ಚಿಹ್ನೆಯನ್ನು ಬಳಸಿ ಕಾರ್ಯಕರ್ತರು ಬೇರೆ ಯಾವ ಪಕ್ಷಕ್ಕೂ ಪ್ರಚಾರ ಮಾಡುವಂತಿಲ್ಲ’ ಎಂದಿದ್ದಾರೆ! ‘ಕೇಂದ್ರದಲ್ಲಿ ಸ್ಥಿರ ಸರ್ಕಾರ ತಂದು ತಮಿಳುನಾಡಿನ ನೀರಿನ ಬಿಕ್ಕಟ್ಟಿಗೆ ಯಾರು ಶಾಶ್ವತ ಪರಿಹಾರದ ಭರವಸೆ ನೀಡುತ್ತಾರೋ ಅವರನ್ನು ಬೆಂಬಲಿಸಿ, ಅವರಿಗೆ ಮತ ನೀಡಿ’ ಎಂದೂ ಮನವಿ ಮಾಡಿದ್ದಾರೆ.

ರಜನಿ ಹೇಳಿಕೆ ಅವರ ರಾಜಕೀಯ ಧೋರಣೆಯ ಅಸ್ಪಷ್ಟತೆಯನ್ನೂ ರಾಜಕೀಯ ಅಸಹಾಯಕತೆಯನ್ನೂ ಎತ್ತಿ ತೋರಿಸುವಂತಿದೆ. ‘ರಜನಿ ಮಕ್ಕಳ್ ಮಂದ್ರಂ’ ಪಕ್ಷದ ಉದ್ದೇಶ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದು, ಲೋಕಸಭೆಗಲ್ಲ’ ಎನ್ನುವ ಅವರ ಮಾತು, ಕಾರ್ಯಕರ್ತರು ಇನ್ನೂ ಎರಡು ವರ್ಷ ಕಾಯಬೇಕು ಎಂದು ಸೂಚಿಸಿದೆ. ಎರಡು ವರ್ಷ ಕಳೆದ ಬಳಿಕ, ‘ನಾವು ಈಗಲ್ಲ, 2026ರ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುತ್ತೇವೆ’ ಎಂದು ರಜನಿ ಹೇಳುವ ಸಾಧ್ಯತೆ ಇರಬಹುದೆ... ಎನ್ನುವ ಪ್ರಶ್ನೆಗೆ ‘ನೋ’ ಎಂದು ಹೇಳುವುದೂ ಕಷ್ಟ!

ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋಗಿ ಅಲ್ಲಿಯ ಸಿನಿಮಾ ಕ್ಷೇತ್ರದಲ್ಲಿ ಅನಭಿಷಿಕ್ತ ದೊರೆಯಂತೆ ಮೆರೆದ ರಜನಿಕಾಂತ್, ನೇರ ರಾಜಕೀಯ ಪ್ರವೇಶಿಸುವುದಕ್ಕೆ ಇಷ್ಟೊಂದು ಹೆದರುವುದೇಕೆ? ಈ ಹಿಂದೆ ಅವರಿಗೆ ರಾಜಕೀಯಕ್ಕೆ ಧುಮುಕಲು ಪ್ರಶಸ್ತ ವಾತಾವರಣವಿತ್ತು. ಆದರೆ ಅಂತಹ ಅವಕಾಶಗಳನ್ನೆಲ್ಲ ಅವರು ಕೈಚೆಲ್ಲಿದ್ದಾರೆ. ಈಗ ತಮಿಳುನಾಡಿನ ಇಬ್ಬರು ಶಕ್ತಿಕೇಂದ್ರಗಳಾಗಿದ್ದ ಜಯಲಲಿತಾ ಮತ್ತು ಕರುಣಾನಿಧಿ ಇಲ್ಲ. ಈಗಲೂ ಪ್ರಶಸ್ತ ಸಮಯವೇ. ಆದರೆ ರಜನಿಗೆ ನಿರ್ಧಾರ ಕೈಗೊಳ್ಳಲು ಆಗುತ್ತಿಲ್ಲ.

1996ರ ಚುನಾವಣೆಯಲ್ಲಿ ರಜನಿ ಮೊದಲ ಬಾರಿಗೆ ಡಿಎಂಕೆ–ಟಿಎಂಸಿ ಮೈತ್ರಿಕೂಟಕ್ಕೆ ಬಹಿರಂಗ ಬೆಂಬಲ ಘೋಷಿಸಿದರು. ಆ ಮೈತ್ರಿಕೂಟ ತಮಿಳುನಾಡಲ್ಲಿ ಅದ್ಭುತ ಜಯ ಸಾಧಿಸಿತು. 1998ರಲ್ಲಿ ಮತ್ತೆ ಅದೇ ಮೈತ್ರಿಕೂಟಕ್ಕೆ ರಜನಿ ಬೆಂಬಲ ನೀಡಿದರೂ ಆ ಕೂಟ ಸೋಲಪ್ಪಿತು. 2004ರಲ್ಲಿ ಪಿಎಂಕೆ ಪಕ್ಷದ ವಿರುದ್ಧ ರಜನಿ ಹೇಳಿಕೆ ನೀಡಿದರೂ, ಮತದಾರರು ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದಾಗಿ 13 ವರ್ಷಗಳ ಕಾಲ ರಜನಿಕಾಂತ್ ನೇರ ರಾಜಕೀಯದ ಬಗ್ಗೆ ಮಾತನಾಡದೆ ಸುಮ್ಮನಿದ್ದರು. ಯಾವಾಗ ಜಯಲಲಿತಾ ನಿಧನ ಹೊಂದಿದರೋ, ಆಗ ರಜನಿಯ ರಾಜಕೀಯ ಧೈರ್ಯ ಮೇಲೆದ್ದು ಬಂತು. ಜೊತೆಗೆ ಎಂ.ಕರುಣಾನಿಧಿ ಅವರೂ ಆಗ ಹಾಸಿಗೆ ಹಿಡಿದಿದ್ದರು. ರಜನಿ ಸ್ವಂತ ಪಕ್ಷದ ಘೋಷಣೆ ಮಾಡಿದರು.

ರಜನಿಗೀಗ 68ರ ಹರೆಯ. ಸ್ವಂತ ಪಕ್ಷದ ಘೋಷಣೆ ಮಾಡಿ 14 ತಿಂಗಳೇ ಕಳೆದಿವೆ. ‘ರಜನಿ ಮಕ್ಕಳ್ ಮಂದ್ರಂ’ ಒಂದು ರಾಜಕೀಯ ಪಕ್ಷವಾಗಿ ಬೆಳೆಯುವುದಕ್ಕೆ ಬೇಕಾದ ಯಾವ ಪೂರಕ ಚಟುವಟಿಕೆಗಳೂ ನಡೆಯುತ್ತಿಲ್ಲ. ಕೇವಲ ಅಭಿಮಾನಿ ಸಂಘದ ಚಟುವಟಿಕೆಗಳನ್ನೇ ರಾಜಕೀಯ ಚಟುವಟಿಕೆ ಎಂದು ಭಾವಿಸಿದಂತಿದೆ. ಹೊಸ ಪಕ್ಷ ಸ್ಥಾಪಿಸಿದ ನಟ ಕಮಲಹಾಸನ್, ಸೈದ್ಧಾಂತಿಕ ವಿಷಯಗಳಿಗೆ ಸಂಬಂಧಿಸಿ ಪದೇಪದೇ ಮಾತನಾಡುತ್ತಿದ್ದಾರೆ. ಅಂತಹ ಸೈದ್ಧಾಂತಿಕ ನಿಲುವುಗಳೂ ರಜನಿಗೆ ಇದ್ದಂತಿಲ್ಲ. ರಜನಿ ಅವರ ‘ನೀರಿನ ಬಿಕ್ಕಟ್ಟು ನಿವಾರಿಸುವ ಭರವಸೆ ನೀಡುವವರಿಗೆ ಮತ ನೀಡಿ’ ಎನ್ನುವ ಹೇಳಿಕೆ ಎಷ್ಟು ಅಸ್ಪಷ್ಟವೆಂದರೆ, ಎಲ್ಲ ರಾಷ್ಟ್ರೀಯ ಪಕ್ಷಗಳೂ ಈ ಭರವಸೆಯನ್ನು ನೀಡಿದರೆ ಅಭಿಮಾನಿಗಳು ಯಾರಿಗೆ ಮತ ನೀಡಬೇಕು? ರಜನಿಯ ಈ ಹೇಳಿಕೆ ತಮ್ಮ ಪಕ್ಷದ ಪರವಾದ ಹೇಳಿಕೆ ಎಂದು ಅಣ್ಣಾಡಿಎಂಕೆ ಹೇಳಿಕೊಂಡಿದೆ. ಅಣ್ಣಾಡಿಎಂಕೆ ರಾಷ್ಟ್ರೀಯ ಮಟ್ಟದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಜೊತೆಗೆ ಸೇರಿಕೊಂಡಿದೆ. ಹೀಗಾಗಿ ರಜನಿ ಪರೋಕ್ಷವಾಗಿ ಬಿಜೆಪಿಯನ್ನು ಬೆಂಬಲಿಸಿದಂತೆ ಎನ್ನುವ ವ್ಯಾಖ್ಯಾನಗಳೂ ಕೇಳಿಬರುತ್ತಿವೆ.

ರಾಜಕೀಯ ಪಕ್ಷವನ್ನು ಕಟ್ಟುವುದು ಪಾರ್ಟ್‌ಟೈಮ್ ಕೆಲಸವಲ್ಲ. ಸಿನಿಮಾ ಕೆಲಸ ಇಟ್ಟುಕೊಂಡು ರಾಜಕೀಯವನ್ನೂ ಮಾಡುವುದು ಕಷ್ಟ. ಆದರೆ ರಜನಿ ಸಿನಿಮಾದಲ್ಲಿ ನಟಿಸುವುದನ್ನು ಮುಂದುವರಿಸಿದ್ದಾರೆ. ಈ ವರ್ಷದ ಮೊದಲ ಚಿತ್ರ ‘ಪೆಟ್ಟಾ’ ಈಗಾಗಲೇ ಬಿಡುಗಡೆಯಾಗಿದೆ. ಟ್ರೇಲರ್‌ಗಳನ್ನು ನೋಡಿದರೆ ಇನ್ನೂ ಮೂರು ಸಿನಿಮಾಗಳು ಈ ವರ್ಷವೇ ತೆರೆಗೆ ಬರುವ ಸೂಚನೆಯಿದೆ. 200ಕ್ಕೂ ಹೆಚ್ಚು ಸಿನಿಮಾಗಳನ್ನು ಮಾಡಿ, ಬಹುತೇಕ ಸಿನಿಮಾಗಳಲ್ಲಿ ಹಣ, ಕೀರ್ತಿ, ಅಭಿಮಾನಿಗಳನ್ನು ಗೆದ್ದಿರುವ ಸೂಪರ್‌ಸ್ಟಾರ್, ಒಂದು ಚುನಾವಣೆಯಲ್ಲಿ ನೇರಸ್ಪರ್ಧೆಗೆ ಹೆದರುವುದು ತಮಾಷೆಯಾಗಿದೆ. ಅದೂ ಹಗಲೂ ರಾತ್ರಿ ಸಿನಿಮಾಗಳನ್ನೇ ಉಸಿರಾಡುವ ತಮಿಳುನಾಡಿನಂತಹ ರಾಜ್ಯವೊಂದರಲ್ಲಿ ರಜನಿ ಹೆದರುವುದೇಕೆ? ತಮಿಳುನಾಡಿನ ಮುಂದಿನ ವಿಧಾನಸಭಾ ಚುನಾವಣೆ ಬರುವಾಗ ರಜನಿಗೆ 70 ವರ್ಷ ದಾಟಿರುತ್ತದೆ. 70ರ ಬಳಿಕ ಹೊಸ ಪಕ್ಷವೊಂದನ್ನು ಕಟ್ಟಿ ರಾಜಕೀಯ ಮಾಡುವುದು ಎಷ್ಟರ ಮಟ್ಟಿಗೆ ಪ್ರಾಯೋಗಿಕ?

■ ಬಿಂದು



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65